**ಸಿ. ಎಸ್. ಐ. ಕರ್ನಾಟಕ ಮಧ್ಯ ಸಭಾಪ್ರಾಂತ್ಯ**
**ವಿಕಲಚೇತನರ ಪಾಲನೆ ಮತ್ತು ಮಾನವಗೌರವ**
**ಅಕ್ಟೋಬರ್ 2019**

**ಆರಾಧನೆಗೆ ಕರೆ**
**ನಾಯಕರು:** ನಮ್ಮ ಅಂತರೀಂದ್ರಿಯಗಳನ್ನು ಉಂಟುಮಾಡಿದ ದೇವರು ನೀನಲ್ಲವೋ?

**ಸಭೆ: ನೀನು ನಮ್ಮನ್ನು ಅದ್ಭುತವಾಗಿಯೂ ವಿಚಿತ್ರವಾಗಿಯೂ ರಚಿಸಿದ್ದರಿಂದಲೂ ನಿನ್ನ ಕೃತ್ಯಗಳು ಆಶ್ಚರ್ಯವಾಗಿವೆ ಎಂತಲೂ ನಿನ್ನನ್ನು ಸ್ತುತಿಸಿ ಕೊಂಡಾಡುತ್ತೇವೆ.**

**ನಾಯಕರು:** ನಾವು ಗುಪ್ತ ಸ್ಥಳದಲ್ಲಿ ಏರ್ಪಡುತ್ತಾ ಇದ್ದಾಗ ನಮ್ಮ ಅಸ್ಥಿಪಂಜರವು ನಿನಗೆ ಮರೆಯಾಗಿದ್ದಿಲ್ಲ.

**ಸಭೆ: ನೀನು ನಮ್ಮನ್ನು ಅದ್ಭುತವಾಗಿಯೂ ವಿಚಿತ್ರವಾಗಿಯೂ ರಚಿಸಿದ್ದರಿಂದಲೂ ನಿನ್ನ ಕೃತ್ಯಗಳು ಆಶ್ಚರ್ಯವಾಗಿವೆ ಎಂತಲೂ ನಿನ್ನನ್ನು ಸ್ತುತಿಸಿ ಕೊಂಡಾಡುತ್ತೇವೆ.**

**ನಾಯಕರು:** ನಾವು ಭೂಗರ್ಭದಲ್ಲಿ ರಚಿಸಲ್ಪಡುತ್ತಾ ಇದ್ದಾಗ, ಇನ್ನೂ ಕೇವಲ ಪಿಂಡವಾಗಿರುವಾಗ ನಿನ್ನ ಕಣ್ಣುಗಳು ನಮ್ಮನ್ನು ನೋಡಿದವು.

**ಸಭೆ: ನೀನು ನಮ್ಮನ್ನು ಅದ್ಭುತವಾಗಿಯೂ ವಿಚಿತ್ರವಾಗಿಯೂ ರಚಿಸಿದ್ದರಿಂದಲೂ ನಿನ್ನ ಕೃತ್ಯಗಳು ಆಶ್ಚರ್ಯವಾಗಿವೆ ಎಂತಲೂ ನಿನ್ನನ್ನು ಸ್ತುತಿಸಿ ಕೊಂಡಾಡುತ್ತೇವೆ.**

**ನಾಯಕರು:** ನಮ್ಮ ಸೃಷ್ಟಿಕರ್ತನಾದ ದೇವರಿಗೆ ಎಲ್ಲಾ ಘನ ಮಾನ ಪ್ರಭಾವವು ಇರಲಿ.

ಈ ಆರಾಧನೆಯ ಆರಂಭವು ತ್ರಯೈಕ ದೇವರ ನಾಮದಲ್ಲಾಗಲಿ. ಆಮೆನ್

**ಸಂಗೀತ:**

**ಕೃತಜ್ಞತಾ ಸ್ತುತಿಯ ಪ್ರಾರ್ಥನೆ**

**ನಾಯಕರು:** ಪೂಜ್ಯ ದೇವರೇ, ನಮ್ಮ ಕರ್ತನೇ, ನಮಗೋಸ್ಕರ ನಿನ್ನ ಉದ್ದೇಶಗಳನ್ನು ನೆರವೇರಿಸುವಿ ಎಂದು ನಂಬುವವರಾಗಿ ನಿನಗೆ ಸ್ತುತಿಯನ್ನು ಕೃತಜ್ಞತೆಯನ್ನು ಸಲ್ಲಿಸುತ್ತೇವೆ. ನಿನ್ನ ಪ್ರೀತಿಯು ಶಾಶ್ವತವಾಗಿ ನಿನ್ನ ಕರುಣೆಯು ಪ್ರತಿನಿತ್ಯವೂ ನವೀಕರಣವಾಗುವಂಥದ್ದಾಗಿದೆ.

**ಸಭೆ: ದೇವರೇ, ನಿನ್ನ ಸಂಕಲ್ಪಗಳು ನನ್ನ ಎಣಿಕೆಯಲ್ಲಿ ಎಷ್ಟೋ ಗೌರವವುಳ್ಳದ್ದಾಗಿವೆ; ಅವುಗಳ ಒಟ್ಟು ಅಸಂಖ್ಯವಾಗಿವೆ.**

**ನಾಯಕರು:** ಪರಮ ಪೂಜ್ಯ ದೇವರೇ, ನಮ್ಮ ಕರ್ತನೇ, ದಾವೀದನು ಮೆಫೀಭೋಶತನನ್ನು ಪರಿಗಣಿಸಿ ತನ್ನ ಅನ್ಯೋನ್ಯತೆಯಲ್ಲಿ ಸೇರಿಸಿಕೊಂಡ ಪ್ರಕಾರ ನೀನು ನಮ್ಮನ್ನು ಸೇರಿಸಿಕೊಳ್ಳುತ್ತೀ ಎಂಬುದನ್ನು ನಂಬುವವರಾಗಿ ನಿನಗೆ ಸ್ತುತಿಯನ್ನು, ಕೃತಜ್ಞತೆಯನ್ನು ಸಲ್ಲಿಸುತ್ತೇವೆ.

**ಸಭೆ: ದೇವರೇ, ನಿನ್ನ ಸಂಕಲ್ಪಗಳು ನನ್ನ ಎಣಿಕೆಯಲ್ಲಿ ಎಷ್ಟೋ ಗೌರವವುಳ್ಳದ್ದಾಗಿವೆ; ಅವುಗಳ ಒಟ್ಟು ಅಸಂಖ್ಯವಾಗಿವೆ.**

**ನಾಯಕರು:** ಪರಮ ಪೂಜ್ಯ ದೇವರೇ, ನಮ್ಮ ಕರ್ತನೇ, ಕುರುಡರೂ ಕುಂಟರೂ ಯೇಸುಕ್ರಿಸ್ತನ ಬಳಿಗೆ ಬಂದಾಗ ಆತನು ಅವರನ್ನು ಸ್ವಸ್ಥಪಡಿಸಿದ್ದನೋ ಹಾಗೆಯೇ ನಮ್ಮ ಯೋಗ್ಯತೆಯ ಮೇರೆಯನ್ನ ದಾಟಿ ನಮ್ಮನ್ನು ಸ್ವೀಕರಿಸುವಿ ಎಂದು ನಿರೀಕ್ಷಿಸುವವರಾಗಿ ನಿನಗೆ ಸ್ತುತಿಯನ್ನು ಕೃತಜ್ಞತೆಯನ್ನು ಸಲ್ಲಿಸುತ್ತೇವೆ.

**ಪಾಪದರಿಕೆಗೆ ಕರೆ**

**ನಾಯಕರು:** ಕರ್ತನಾದ ದೇವರು ಹೇಳಿದ್ದೇನೆಂದರೆ, ಮನುಷ್ಯರಿಗೆ ಬಾಯಿಕೊಟ್ಟವರಾರು? ಒಬ್ಬನು ಮೂಕನಾಗಿ ಮತ್ತೊಬ್ಬನು ಕಿವುಡನಾಗಿ ಒಬ್ಬನು ಕಣ್ಣುಳ್ಳವನಾಗಿ ಮತ್ತೊಬ್ಬನು ಕಣ್ಣಿಲ್ಲದವನಾಗಿ ಇರಬೇಕೆಂದು ನೇಮಿಸಿದವರಾರು? ಕರ್ತನಾದ ನಾನೇ ಅಲ್ಲವೇ? ದೇವರ ಸ್ವರೂಪವು ಎಲ್ಲಾದರಲ್ಲೂ ವ್ಯಾಪಕವಾಗಿದೆ, ಅದನ್ನು ಮಾನವರು ಗ್ರಹಿಸಲು ಅಸಾಧ್ಯವಾದದ್ದು. ದೇವರ ನೈಜ ಪ್ರಕಟನೆಯನ್ನು ಅರ್ಥಮಾಡಿಕೊಳ್ಳದೇ ದೇವರು ತಾನೇ ಆಶೀರ್ವದಿಸಿದ ವಿಕಲಚೇತನರನ್ನು ಪೂರ್ವಾಗ್ರಹ ತೀರ್ಮಾನ ಹಾಗೂ ಮನೋಭಾವನೆಯಿಂದ ತೀರ್ಪುಮಾಡಿದ್ದೇವೆ. ಆದ್ದರಿಂದ ದೇವರ ವೈವಿಧ್ಯಮಯವಾದ ಸ್ವರೂಪವನ್ನು ಪರಿಗಣಿಸಿ ದೇವರಲ್ಲಿ ಕ್ಷಮೆಯಾಚಿಸೋಣ.

**ಸಭೆ: ಕರ್ತನಾದ ದೇವರೇ, ನೀನು ನಮ್ಮನ್ನು ಪರೀಕ್ಷಿಸಿ ತಿಳುಕೊಂಡಿದ್ದೀ; ನಾವು ದೈಹಿಕವಾಗಿಯೂ ಮಾನಸಿಕವಾಗಿಯೂ ತೊಂದರೆಗೊಳಗಾದವರನ್ನು ಕೀಳರಿಮೆಯಿಂದ ಆಲೋಚಿಸಿರುವ ನಮ್ಮ ಮನಸ್ಸನ್ನು ಬಲ್ಲಾತನು ನೀನು, ನಮ್ಮನ್ನು ಕ್ಷಮಿಸು ದೇವರೇ. ನಾವು ಅಪೂರ್ಣರೆಂದು ಭಾವಿಸಿದ್ದವರನ್ನು ಖಂಡಿಸಿ ಅಪಹಾಸ್ಯಮಾಡಿದ್ದನ್ನು ಬಲ್ಲಾತನು ನೀನು, ನಮ್ಮನ್ನು ಕ್ಷಮಿಸು ದೇವರೇ. ವಿಶೇಷ ಸಹಾಯದ ಅಗತ್ಯವಿರುವವರನ್ನು ಸಮಾಜಕ್ಕೆ ಹೊರೆಯೂ ಶಾಪವೆಂದೂ ಕುಟುಂಬಕ್ಕೆ ಕುಂಟಿತವೆಂದೂ ಆಲೋಚಿಸಿದ ನಮ್ಮ ಭಾವನೆಗಳನ್ನು ಬಲ್ಲಾತನು ನೀನು, ನಮ್ಮನ್ನು ಕ್ಷಮಿಸು ದೇವರೇ.**

**ಎಲ್ಲರೂ: ದೇವರೇ, ನಾವು ನಿನ್ನಲ್ಲಿ ಭಯಭಕ್ತಿಯುಳ್ಳವರಾಗಿ ವಿಕಲಚೇತನರಿಗೆ ಅಡ್ಡಿಯಾಗಿರದೇ, ಅವರಿಗೆ ಗೌರವವು, ಘನತೆಯು ದೊರೆಯುವಂಥ ಸೇತುವಗಳಾಗುವಂತೆ ನಮಗೆ ಸಹಾಯಿಸು. ಆಮೆನ್**

**ಆದರಣೆಯ ವಾಕ್ಯ**

**ನಾಯಕರು:** ನಾವು ಉಳಿದಿರುವುದು ಕರ್ತನ ಕರುಣೆಯೇ; ಆತನ ಕೃಪಾವರಗಳು ನಿಂತುಹೋಗವು. ದಿನದಿನವು ಹೊಸಹೊಸದಾಗಿ ಒದಗುತ್ತದೆ; ನಿನ್ನ ಸತ್ಯ ಸಂಧತೆಯು ದೊಡ್ಡದು (ಪ್ರಲಾಪ 3:22–23).

ನಿಮ್ಮ ಕಾಲುಗಳಿಂದ ನೆಟ್ಟಗೆ ಮುಂದೆ ನಡೆಯಿರಿ. ಹೀಗೆ ಮಾಡಿದರೆ ಕುಂಟಕಾಲು ಉಳುಕಿಹೋಗದೇ ವಾಸಿಯಾಗುವುದು. (ಇಬ್ರೀಯ 12:13).

ಅದಕ್ಕಾತನು, ನನ್ನ ಕೃಪೆಯೇ ನಿನಗೆ ಸಾಕು; ಬಲಹೀನತೆಯಲ್ಲಿ ಬಲವು ಪೂರ್ಣ ಸಾಧಕವಾಗುತ್ತದೆ ಎಂದು ನನಗೆ ಹೇಳಿದ್ದಾನೆ. ಹೀಗಿರಲಾಗಿ ಕ್ರಿಸ್ತನ ಬಲವು ನಿನ್ನಲ್ಲಿ ನೆಲೆಸಿಕೊಂಡಿರಬೇಕೆಂದು ನನಗುಂಟಾಗುವ ನಿರ್ಬಲಾವಸ್ಥೆಗಳ ವಿಷಯದಲ್ಲಿಯೇ ಬಹು ಸಂತೋಷವಾಗಿ ಹೆಚ್ಚಳಪಡುವೆನು.

ಆದದರಿಂದ ಕ್ರಿಸ್ತನ ನಿಮಿತ್ತ ನನಗೆ ನಿರ್ಬಲಾವಸ್ಥೆಯೂ ತಿರಸ್ಕಾರವೂ ಕೊರತೆಯೂ ಹಿಂಸೆಯೂ ಇಕ್ಕಟ್ಟೂ ಸಂಭವಿಸಿದಾಗ ಸಂತುಷ್ಟನಾಗಿದ್ದೇನೆ. ನಾನು ಯಾವಾಗ ನಿರ್ಬಲನಾಗಿದ್ದೇನೋ ಆಗಲೇ ಬುವುಳ್ಳವನಾಗಿದ್ದೇನೆ (2 ಕೊರಿಂಥ 12:9–10).

ಸರ್ವಶಕ್ತನಾದ ದೇವರು ತಾನೇ ನಮ್ಮನ್ನು ನಿರೀಕ್ಷೆಯ ಸಾಧನಗಳಾಗುವಂತೆ ನೂತನ ಮಾರ್ಗವನ್ನು ದಯಪಾಲಿಸಲಿ. ಸರ್ವಶಕ್ತನಾದ ದೇವರು ತಾನೇ, ತನ್ನ ಸ್ವರೂಪದಲ್ಲಿ ಎಲ್ಲವನ್ನೂ ಸ್ವೀಕರಿಸುವ ಒಮ್ಮನಸನ್ನು ನಮಗೆ ದಯಪಾಲಿಸಲಿ. ಸರ್ವಶಕ್ತನಾದ ದೇವರು ತಾನೇ ನಮ್ಮ ಜೀವಿತದಲ್ಲಿ ತನ್ನ ಚಿತ್ತವನ್ನು ನೆರೆವೇರಿಸಲು ಬಲವನ್ನು ದಯಪಾಲಿಸಲಿ. ಆಮೆನ್

**ಪ್ರಾರ್ಥನೆ**

**ನಾಯಕರು:** ನಮ್ಮ ಕರ್ತನಾದ ದೇವರೇ, ನಿನ್ನ ಮಗನಾದ ಯೇಸುಕ್ರಿಸ್ತನು ಎಲ್ಲಾ ಅಸ್ವಸ್ಥತೆಯನ್ನು ವಾಸಿಮಾಡುವ ಮಹಾವೈದ್ಯನಾಗಿದ್ದಾನೆ. ಮಾನಸಿಕವಾಗಿ ಕುಂದಿಹೋದವರಿಗೆ ಆದರಣೆಯನ್ನು ದಯಪಾಲಿಸುವ ಪ್ರಕಾರ ದೈಹಿಕವಾಗಿ ದುರ್ಬಲಗೊಂಡವರಿಗೆ ನಿನ್ನ ಆತ್ಮನ ಶಕ್ತಿಯಿಂದ ಬಲಪಡಿಸು. ಕ್ರಿಸ್ತ ಯೇಸುವು ತನ್ನ ಭೂಯಾತ್ರೆಯ ಸೇವೆಯಲ್ಲಿ ಮಾನಸಿಕ ಹಾಗೂ ದೈಹಿಕವಾಗಿ ವಿವಿಧರೀತಿಯಲ್ಲಿ ಸಾಮರ್ಥ್ಯರಾದವರಿಗೆ ನಿಜವಾದ ಮೌಲ್ಯವನ್ನು, ಯೋಗ್ಯತೆಯನ್ನೂ ದೃಢೀಕರಿಸಿರುವಂತೆ ಸಭೆಯು ಅವರನ್ನು ಪ್ರೀತಿಸಿ ಕಾಳಜಿತೋರುವ ಮುಖ್ಯವಾಹಿನಿಯಾಗಬೇಕು. ದೇವರೊಂದಿಗೂ ಪವಿತ್ರಾತ್ಮನೊಂದಿಗೂ ಸದಾಕಾಲ ಜೀವಿಸಿ ಆಳುವ ಕರ್ತನಿಗೆ ಎಂದೆಂದೂ ಮಹಿಮೆಯಾಗಲಿ. ಆಮೆನ್

**ಪಾರಾಯಣ ಹಳೇ ಒಡಂಬಡಿಕೆ**
2 ಸಮುವೇಲನು 9:1–13
ಕೀರ್ತನೆ 146
**ಹೊಸ ಒಡಂಬಡಿಕೆ**
**ಪತ್ರಿಕಾ ಭಾಗ**– ಅಪೋಸ್ತಲರ ಕೃತ್ಯಗಳು 9:32–35
**ಸುವಾರ್ತಾ ಭಾಗ** – ಮಾರ್ಕ 3:1–6
**ವಾಕ್ಯ ಸಂದೇಶ**
**ವಿಶ್ವಾಸದರಿಕೆ**
**ಸಭಾಪ್ರಕಟನೆಗಳು**
**ಪರಾರ್ಥ ಪ್ರಾರ್ಥನೆ**
**ನಾಯಕರು:** ಕರುಣೆಯುಳ್ಳ ದೇವರೇ, ದುರ್ಬಲ ವೇಳೆಯಲ್ಲಿ ನಿನ್ನ ಶಕ್ತಿಯ ಸೌಂಧರ್ಯವನ್ನು ನೋಡಿ ಸಾಕ್ಷಿಗಳಾಗಿದ್ದೇವೆ. ವಿಶೇಷವಾಗಿ ವೈದ್ಯರಾ ಮೇರಿ ವರ್ಗೀಸ್ ರವರು ಕಾಲುಕುರ್ಚಿ ಶಸ್ತ್ರ ಚಿಕಿತ್ಸಕರಾಗಿ ಸೇವೆಯು ಕಾರ್ಯಗಳನ್ನು ಸಲ್ಲಿಸಿದ್ದನ್ನು ಈ ಸಂಧರ್ಭದಲ್ಲಿ ಸ್ಮರಿಸಿಕೊಳ್ಳುತ್ತೇವೆ. ಅವರು ತನ್ನ ದೈಹಿಕ ಸವಾಲುಗಳೊಂದಿಗೆ ಅನೇಕರಿಗೆ ಸ್ಫೂರ್ತಿ ನೀಡಿದ್ದಾರೆ. ಮಾತ್ರವಲ್ಲದೇ. ಅನೇಕರನ್ನು ಸ್ವಸ್ಥಪಡಿಸಲು ಮತ್ತು ನಿರೀಕ್ಷೆ ಹುಟ್ಟಿಸಲು ಸಮಾಜದಲ್ಲಿ ಓರ್ವ ಸಾಧನವಾಗಿದ್ದಾರೆ.

**ಸಭೆ: ದೇವರೇ, ಮೂಖರು ಮಾತಾಡುವಂತೆ, ಕುಂಟರು ನಡೆಯುವಂತೆ. ಕುರುಡರು ನೋಡುವಂತೆ ಸಹಾಯಮಾಡು.**

**ನಾಯಕರು:** ಕರುಣೆಯುಳ್ಳ ದೇವರೇ, ಬಿಕ್ಕಟ್ಟಿನ ಸಮಯದಲ್ಲಿ ನಿನ್ನ ಆಳವಾದ ಜ್ಞಾನವನ್ನು ಗ್ರಹಿಸಿದ್ದೇವೆ. ಈ ಸಂದರ್ಭದಲ್ಲಿ ನಾವು ಜಾನ್ ವುಜಿಚಿಚ್ ಅವರ ಕೊಡುಗೆಗಳನ್ನು ಸ್ಮರಿಸುತ್ತೇವೆ. ಕಾಲಿಲ್ಲದವರಿಗೆ ಜೀವವನ್ನು ತುಂಬಿದ

ನಿರ್ಮಾಪಕರಾಗಿದ್ದಾರೆ, ಇಡೀ ವಿಶ್ವವನ್ನೇ ತನ್ನ ಸ್ಫೂರ್ತಿದಾಯಕ ಮಾತುಗಳನ್ನು ನುಡಿಯುವ ಮೂಲಕ ಪ್ರೇರೇಪಿಸಿದ್ದಾರೆ.

**ಸಭೆ: ದೇವರೇ, ಮೂಖರು ಮಾತಾಡುವಂತೆ, ಕುಂಟರು ನಡೆಯುವಂತೆ. ಕುರುಡರು ನೋಡುವಂತೆ ಸಹಾಯಮಾಡು.**

**ನಾಯಕರು:** ಕರುಣೆಯುಳ್ಳ ದೇವರೇ, ಅಂಗವೈಕಲ್ಯವುಳ್ಳ ಮಕ್ಕಳನ್ನು ನೋಡಿಕೊಳ್ಳುವ, ಪೋಷಿಸುವ ಅನೇಕ ಹೆತ್ತವರನ್ನು ನೋಡುವ ಮೂಲಕ ಮಾನವೀಯತೆಯ ನಿಜವಾದ ಬೆಲೆಯನ್ನು ತಿಳುಕೊಂಡಿದ್ದೇವೆ. ಅವರ ಸೇವೆ ಹಾಗೂ ಮಕ್ಕಳ ಜೀವನವನ್ನು ಘನತೆಯಿಂದಲೂ ಗೌರವದಿಂದಲೂ ರೂಪಿಸಿದವರನ್ನು ವಿಶೇಷವಾಗಿ ಗುರುತಿಸುವವರಾಗಿದ್ದೇವೆ.

**ಸಭೆ: ದೇವರೇ, ಮೂಖರು ಮಾತಾಡುವಂತೆ, ಕುಂಟರು ನಡೆಯುವಂತೆ. ಕುರುಡರು ನೋಡುವಂತೆ ಸಹಾಯಮಾಡು.**

**ನಾಯಕರು:** ಕರುಣೆಯುಳ್ಳ ದೇವರೇ, ಕೆ.ಸಿ.ಡಿ.ಯ **"ಅರ್ಪಣಾ"** ಎಂಬ ವಿಶೇಷ ಶಾಲೆಯ ಕೊಡುಗೆಯನ್ನು ಅವರ ಅತ್ಯುತ್ತಮವಾದ ಬದ್ಧತೆಯ ಹಾಗೂ ಸಮರ್ಪಣೆಯ ಸೇವೆಯ ಮುಖಾಂತರ ನಾವು ನಿನ್ನ ಪ್ರೀತಿಯನ್ನು ಅರಿತುಕೊಂಡಿದ್ದೇವೆ. ಈ ಸಂಸ್ಥೆಯು ಸತತ 38 ವರ್ಷಗಳಿಂದ ಮಕ್ಕಳಿಗೆ ಮೌಲ್ಯಾಧಾರಿತ ಶಿಕ್ಷಣವನ್ನು ಹಲವು ತರಬೇತಿಯ ಮೂಲಕ ಹಾಗು ಬೋಧನೆಯ ಮೂಲಕ ನಿನ್ನ ಪ್ರೀತಿಯನ್ನು ಪ್ರಕಟಿಸಿದ್ದಾರೆ.

**ಸಭೆ: ದೇವರೇ, ಮೂಖರು ಮಾತಾಡುವಂತೆ, ಕುಂಟರು ನಡೆಯುವಂತೆ. ಕುರುಡರು ನೋಡುವಂತೆ ಸಹಾಯಮಾಡು.**

**ಕರ್ತನ ಪ್ರಾರ್ಥನೆ**
**ಸಂಗೀತ:**
**ಆಶೀರ್ವಚನ**
ಎಲ್ಲರನ್ನೂ ಉದ್ದೇಶಪೂರ್ವಕವಾಗಿ ಸೃಷ್ಟಿಸಿದ ದೇವರ ಪ್ರೀತಿಯು, ದೇವರ ಚಿತ್ತವನ್ನು ಸಂಪೂರ್ಣಗೊಳಿಸಿದ ಯೇಸುಕ್ರಿಸ್ತನ ಕೃಪೆಯು, ಲೋಕದಲ್ಲಿ ದರ್ಶನದ ಮೂಲಕ ನಿಯೋಗವನ್ನು ಮುಂದುವರಿಸುವಂತೆ ನಾವು ಪ್ರೀತಿ ಹಾಗೂ ಪಾಲನೆ ಮಾಡುವಂತೆ ನಮ್ಮನ್ನು ಪ್ರೇರೇಪಿಸುವ ಪವಿತ್ರಾತ್ಮನ ನಡೆಸುವಿಕೆ ಮತ್ತು ಆಶೀರ್ವಾದವು ನಮ್ಮೆಲ್ಲರ ಸಂಗಡ ನಿತ್ಯನಿರಂತರವು ನೆಲೆಯಾಗಿರಲಿ. **ಆಮೆನ್**